**PRESS RELEASE**

# ಫ್ಲಿಪ್ ಕಾರ್ಟ್ ಗ್ರೂಪ್ ನಿಂದ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಆರಂಭ

- **ಕಿರಾಣ ಮತ್ತು ಎಂಎಸ್ಎಂಇಗಳಿಗೆ ನೆರವಾಗುವುದು ಇದರ ಉದ್ದೇಶ**
- **2020 ರ ಆಗಸ್ಟ್ ನಿಂದ ದೇಶಾದ್ಯಂತ ಈ ಸೇವೆ ಲಭ್ಯ**
- **ವಾಲ್ ಮಾರ್ಟ್ ಇಂಡಿಯಾವನ್ನು ಶೇ.100 ರಷ್ಟು ಸ್ವಾಧೀನಪಡಿಸಿಕೊಂಡ ಫ್ಲಿಪ್ ಕಾರ್ಟ್ ಗ್ರೂಪ್**

ಬೆಂಗಳೂರು, ಜುಲೈ 23, 2020: ದೇಶೀಯ ಇ-ಕಾಮರ್ಸ್ ಗ್ರೂಪ್ ಆಗಿರುವ ಫ್ಲಿಪ್ ಕಾರ್ಡ್ ಗ್ರೂಪ್ ಹೊಸ ಡಿಜಿಟಲ್ ಮಾರ್ಕೆಟ್ ಪ್ಲೇಸ್ ಆದ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಸೇವೆಯನ್ನು ಆರಂಭಿಸುವುದಾಗಿ ಘೋಷಿಸಿದೆ. ಕಟ್ಟಿಂಗ್ ಎಡ್ಜ್ ಮತ್ತು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನದ ಮೂಲಕ ದೇಶದಲ್ಲಿ ಕಿರಾಣ ರೀಟೇಲ್ ವ್ಯವಸ್ಥೆಗೆ ನೆರವಾಗುವ ನಿಟ್ಟಿನಲ್ಲಿ ಈ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಅನ್ನು ಆರಂಭಿಸಿದೆ. ಈ ಆರಂಭದ ಭಾಗವಾಗಿ ದೇಶದಲ್ಲಿ ಬೆಸ್ಟ್ ಪ್ರೈಸ್ ಕ್ಯಾಶ್-ಅಂಡ್-ಕ್ಯಾರಿ ವ್ಯವಹಾರವನ್ನು ನಡೆಸುತ್ತಿರುವ ವಾಲ್-ಮಾರ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ ಶೇ.100 ರಷ್ಟು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಿಸಿದೆ. ಈ ಮೂಲಕ ಕಿರಾಣಗಳು ಮತ್ತು ಎಂಎಸ್ಎಂಇಗಳ ಬೆಳವಣಿಗೆಗೆ ನೆರವಾಗುವುದಲ್ಲದೇ, ಹೋಲ್ ಸೇಲ್ ಸಾಮರ್ಥ್ಯಗಳನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಲಿದೆ.

ಭಾರತದ ಪರಿಸರ ವ್ಯವಸ್ಥೆಯಲ್ಲಿ ಕಿರಾಣಗಳು ಮತ್ತು ಎಂಎಸ್ಎಂಇಗಳು ಪ್ರಮುಖ ಸ್ಥಾನದಲ್ಲಿವೆ ಮತ್ತು ಫ್ಲಿಪ್ ಕಾರ್ಟ್ ಈ ಕಿರಾಣಗಳು ಮತ್ತು ಎಂಎಸ್ಎಂಇಗಳಿಗೆ ಗಮನಾರ್ಹವಾದ ಮೌಲ್ಯದಲ್ಲಿ ವಿಸ್ತಾರವಾದ ಆಯ್ಕೆಗಳು, ತಂತ್ರಜ್ಞಾನ ಆಧಾರಿತ ಸೇವೆಗಳನ್ನು ನೀಡುವ ಮೂಲಕ ಅವುಗಳ ದೈನಂದಿನ ವ್ಯವಹಾರಗಳನ್ನು ಸರಳಗೊಳಿಸುತ್ತದೆ. ದಿನಸಿ, ಸಾಮಾನ್ಯ ವ್ಯವಹಾರ ಅಥವಾ ಫ್ಯಾಶನ್ ನಂತಹ ವ್ಯಹವಾರಗಳಿಗೆ ಹೆಚ್ಚು ಅನುಕೂಲ ಮಾಡಿಕೊಡುತ್ತದೆ. ಆಕರ್ಷಕ ಯೋಜನೆಗಳು,

ಪ್ರೋತ್ಸಾಹಗಳು, ಡೇಟಾ ಆಧಾರಿತ ದಾಸ್ತಾನು ಆಯ್ಕೆ, ಕ್ಷಿಪ್ರಗತಿಯಲ್ಲಿ ವಿತರಣೆ ಮತ್ತು ವಿಶ್ವಾಸಾರ್ಹತೆಯ ಜಾಲದೊಂದಿಗೆ ಈ ಕ್ಷೇತ್ರಗಳಿಗೆ ನೆರವಾಗುತ್ತದೆ. ಇದಲ್ಲದೇ, ಅತ್ಯದ್ಭುತವಾದ ಕಾರ್ಯಕ್ಷಮತೆ ಮತ್ತು ಹೆಚ್ಚು ಮಾರ್ಜಿನ್ ನ ಅನುಕೂಲಗಳನ್ನೂ ನೀಡುತ್ತದೆ.

ಇಷ್ಟೇ ಅಲ್ಲದೇ, ಕಿರಾಣಗಳು ಮತ್ತು ಎಂಎಸ್ಎಂಇಗಳಿಗೆ ಸುಲಭವಾದ ಸಾಲದ ಆಯ್ಕೆಗಳು ಮತ್ತು ಅವಕಾಶಗಳನ್ನು ನೀಡುವ ಮೂಲಕ ಹೊಸ ಆದಾಯ ಮೂಲಗಳನ್ನು ಕಲ್ಪಿಸುತ್ತಿದೆ. ಕೋವಿಡ್-19 ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಈ ಸಂದರ್ಭದಲ್ಲಿ ಕಿರಾಣಗಳು ಮತ್ತು ಎಂಎಸ್ಎಂಇಗಳು ತಮ್ಮ ವ್ಯವಹಾರ ಮಟ್ಟವನ್ನು ಹೆಚ್ಚಿಸಿಕೊಳ್ಳುವುದು ಮತ್ತು ಲಾಭ ಗಳಿಸಲು ಈ ಅವಕಾಶಗಳು ಅನುವು ಮಾಡಿಕೊಡುತ್ತವೆ.

ಫ್ಲಿಪ್ ಕಾರ್ಟ್ ಹೋಲ್ ಸೇಲ್ ಫ್ಲಿಪ್ ಕಾರ್ಟ್ ನ ದೇಶೀಯ ಶಕ್ತಿಶಾಲಿಯಾದ ತಂತ್ರಜ್ಞಾನ ಸಾಮರ್ಥ್ಯಗಳು, ಗ್ರಾಹಕ ಇ-ಕಾಮರ್ಸ್ ವಿಭಾಗದಲ್ಲಿನ ಸಮರ್ಥ ನಾಯಕತ್ವ ಮತ್ತು ಭಾರತದಲ್ಲಿನ ಉದ್ಯಮವನ್ನು ವಿನೂತನವಾದ ರೀತಿಯಲ್ಲಿ ಅರ್ಥ ಮಾಡಿಕೊಂಡಿರುವುದು ಸೇರಿದಂತೆ ಹಲವು ವಿಭಾಗಗಳಲ್ಲಿ ಸೌಲಭ್ಯಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತದೆ. ಈ ವ್ಯವಹಾರವು ಫ್ಲಿಪ್ ಕಾರ್ಟ್ ಗ್ರೂಪ್ ನ ವಿಸ್ತಾರವಾದ ಪೂರೈಕೆ ಜಾಲದ ಮೂಲಸೌಕರ್ಯಗಳನ್ನು ಬಳಸಿಕೊಳ್ಳುವ ಮೂಲಕ ದೇಶಾದ್ಯಂತ ಇರುವ ಕಿರಾಣಗಳು ಮತ್ತು ಎಂಎಸ್ಎಂಇಗಳನ್ನು ಸುಲಭವಾಗಿ ತಲುಪಲಿದೆ. ಫ್ಲಿಪ್ ಕಾರ್ಟ್ ಹೋಲ್ ಸೇಲ್, ವಾಲ್ ಮಾರ್ಟ್ ಇಂಡಿಯಾ ತಂಡದ ವ್ಯವಹಾರದ ಅನುಭವಗಳನ್ನು ಸೆಳೆದುಕೊಳ್ಳಲಿದೆ. ಏಕೆಂದರೆ, ವಾಲ್ ಮಾರ್ಟ್ ಇಂಡಿಯಾ ಬ್ರ್ಯಾಂಡ್ ಗಳ ಜತೆಗೆ ಅಗಾಧವಾದ ಸಂಬಂಧಗಳನ್ನು ಹೊಂದಿದೆ, ಕಿರಾಣಗಳಿಗೆ ಪೂರೈಕೆ ಮಾಡುವ ವ್ಯವಸ್ಥೆ ಮತ್ತು 12 ಕ್ಕೂ ಹೆಚ್ಚು ವರ್ಷಗಳಿಂದ ಬೆಸ್ಟ್ ಪ್ರೈಸ್ ಸ್ಟೋರ್ ಗಳನ್ನು ಯಶಸ್ವಿಯಾಗಿ ನಡೆಸಿದ ಅನುಭವವನ್ನು ಹೊಂದಿದೆ. ಈ ಮೂಲಕ ವಾಲ್ ಮಾರ್ಟ್ ಇಂಡಿಯಾ ದೇಶದ ಅತಿದೊಡ್ಡ ಕ್ಯಾಶ್-ಅಂಡ್-ಕ್ಯಾರಿ ವ್ಯವಹಾರಗಳಲ್ಲಿ ಒಂದಾಗಿದೆ. ಬೆಸ್ಟ್ ಪ್ರೈಸ್ ಪ್ರಸ್ತುತ ಕಿರಾಣಗಳು ಮತ್ತು ಎಂಎಸ್ಎಂಇಗಳು ಸೇರಿದಂತೆ 1.5 ದಶಲಕ್ಷ ಸದಸ್ಯರಿಗೆ ಸೇವೆ ಒದಗಿಸುತ್ತಿದೆ. ಅಲ್ಲದೇ, ದೀರ್ಘಾವಧಿಯ ವೈವಿಧ್ಯಮಯ ಪೂರೈಕೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಅನುಭವವನ್ನು ಹೊಂದಿದೆ. ಫ್ಲಿಪ್ ಕಾರ್ಟ್ ಹೋಲ್ ಸೇಲ್ ತಂತ್ರಜ್ಞಾನ ಟೂಲ್ ಗಳನ್ನು ಅಭಿವೃದ್ಧಿಪಡಿಸುವುದನ್ನು ಮುಂದುವರಿಸುತ್ತದೆ ಮತ್ತು ಭಾರತೀಯ ವಾಣಿಜ್ಯ ಕ್ಷೇತ್ರವು ತನ್ನ ಸಾಧ್ಯತೆಗಳನ್ನು ತೆರೆದುಕೊಳ್ಳಲು ನೆರವಾಗುತ್ತದೆ.

ಹೆಸರಾಂತ ಭಾರತೀಯ ಬ್ರ್ಯಾಂಡ್ ಗಳು, ಸ್ಥಳೀಯ ತಯಾರಕರು ಮತ್ತು ಮಾರಾಟಗಾರರು ಫ್ಲಿಪ್ ಕಾರ್ಟ್ ಹೋಲ್ ಸೇಲ್ ನೊಂದಿಗೆ ಪಾಲುದಾರಿಕೆಯನ್ನು ಹೊಂದುವ ಮೂಲಕ ಕಿರಾಣಗಳು ಮತ್ತು

ಎಂಎಸ್ಎಂಇಗಳಿಗೆ ವಿಸ್ತಾರವಾದ ಶ್ರೇಣಿಗಳ ಉತ್ಪನ್ನಗಳು ಮತ್ತು ಖರೀದಿಗಳು ಲಭ್ಯವಾಗುವಂತೆ ಮಾಡಲಿದೆ. ಇದೇ ವೇಳೆ, ಪಾಲುದಾರರು ದೇಶಾದ್ಯಂತ ಗ್ರಾಹಕರನ್ನು ತಲುಪುವುದು, ಮೈಕ್ರೋ-ಮಾರುಕಟ್ಟೆಗಳ ಒಳನೋಟಗಳನ್ನು ತಲುಪಲು ಆವಿಷ್ಕಾರಕವಾದ ಯೋಜನೆಗಳನ್ನು ರೂಪಿಸುವುದು, ಹೊಸ ಉತ್ಪನ್ನಗಳ ಅಭಿವೃದ್ಧಿ ಹಾಗೂ ಕಡಿಮೆ ವೆಚ್ಚದಲ್ಲಿ ವಿತರಣೆ ಸೇರಿದಂತೆ ಇನ್ನಿತರೆ ಪ್ರಯೋಜನಗಳನ್ನು ಪಡೆದುಕೊಳ್ಳಬಹುದಾಗಿದೆ.

ಫ್ಲಿಪ್ ಕಾರ್ಟ್ ಗ್ರೂಪ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕಲ್ಯಾಣ್ ಕೃಷ್ಣಮೂರ್ತಿ ಅವರು ಮಾತನಾಡಿ, ``ಭಾರತದಲ್ಲಿ ಇ-ಕಾಮರ್ಸ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಫ್ಲಿಪ್ ಕಾರ್ಟ್ ಗ್ರೂಪ್ ಭಾರತೀಯ ಲಕ್ಷಾಂತರ ಗ್ರಾಹಕರಿಗೆ ಶಾಪಿಂಗ್ ಅನುಭವದಲ್ಲಿ ರೂಪಾಂತರ ಮಾಡಿದೆ. ಫ್ಲಿಪ್ ಕಾರ್ಟ್ ಹೋಲ್ ಸೇಲ್ ಆರಂಭದ ಮೂಲಕ ತಂತ್ರಜ್ಞಾನ, ಲಾಜಿಸ್ಟಿಕ್ ಮತ್ತು ಹಣಕಾಸು ವಿಭಾಗದಲ್ಲಿನ ನಮ್ಮ ಸಾಮರ್ಥ್ಯಗಳನ್ನು ದೇಶಾದ್ಯಂತ ಇರುವ ಸಣ್ಣ ವ್ಯವಹಾರಗಳಿಗೆ ವಿಸ್ತರಣೆ ಮಾಡಲಿದ್ದೇವೆ. ವಾಲ್ ಮಾರ್ಟ್ ಇಂಡಿಯಾವನ್ನು ಸ್ವಾಧೀನಪಡಿಸಿಕೊಂಡಿರುವುದು ಹೋಲ್ ಸೇಲ್ ಬ್ಯುಸಿನೆಸ್ ವಿಭಾಗವನ್ನು ಮತ್ತಷ್ಟು ಬಲಗೊಳಿಸಲಿದೆ. ವಿಶೇಷವಾಗಿ ಕಿರಾಣಗಳು ಮತ್ತು ಎಂಎಸ್ಎಂಇಗಳ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ನೆರವಾಗುತ್ತದೆ. ಈ ಬೆಳವಣಿಗೆಯೊಂದಿಗೆ ಫ್ಲಿಪ್ ಕಾರ್ಟ್ ಗ್ರೂಪ್, ಕಟ್ಟ ಕಡೆಯ ಗ್ರಾಹಕರವರೆಗೆ ಸೇವೆಗಳು ತಲುಪುವಂತೆ ಮಾಡುವ ಮೂಲಕ ವ್ಯವಹಾರವನ್ನು ಸದೃಢಗೊಳಿಸಲಿದೆ'' ಎಂದು ತಿಳಿಸಿದರು.

ವಾಲ್ ಮಾರ್ಟ್ ಇಂಟರ್ ನ್ಯಾಷನಲ್ ನ ಅಧ್ಯಕ್ಷ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಜುಡಿತ್ ಮ್ಯಾಕ್ ಕೆನ್ನಾ ಅವರು ಮಾತನಾಡಿ, ``ಕಳೆದ ಒಂದು ದಶಕದಿಂದ ನಾವು ಭಾರತದ ಕಿರಾಣಗಳು ಮತ್ತು ಎಂಎಸ್ಎಂಇಗಳಿಗೆ ಸಮೃದ್ಧವಾದ ಸೇವೆಗಳನ್ನು ನೀಡುವ ಬದ್ಧತೆಯನ್ನು ತೋರಿದ್ದೇವೆ, ದೇಶಾದ್ಯಂತ ಸಣ್ಣ ಮಟ್ಟದ ರೈತರಿಗೆ ಬೆಂಬಲವಾಗಿ ನಿಂತಿದ್ದೇವೆ ಮತ್ತು ಝಾಗತಿಕ ಮಟ್ಟದ ತಂತ್ರಜ್ಞಾನ ಹಬ್ ಗಳನ್ನು ಸ್ಥಾಪಿಸುವಲ್ಲಿ ಸಫಲರಾಗಿದ್ದೇವೆ. ಇಂದು ವಾಲ್ಮಾರ್ಟ್ ಇಂಡಿಯಾವು ತನ್ನ ಕ್ಯಾಶ್-ಅಂಡ್-ಕ್ಯಾರಿಯ ಪರಂಪರೆಯನ್ನು ಫ್ಲಿಪ್ ಕಾರ್ಟ್ ಹೋಲ್ ಸೇಲ್ ಮೂಲಕ ಮುಂದುವರಿಸುವ ಒಂದು ದಿಟ್ಟ ಹೆಜ್ಜೆ ಇಟ್ಟಿದೆ. ಪರಸ್ಪರ ಎರಡೂ ಸಂಸ್ಥೆಗಳ ಶಕ್ತಿ ಮತ್ತು ವಿನೂತನವಾದ ಪರಿಣತಿಯನ್ನು ಬಳಸಿಕೊಳ್ಳುವ ಮೂಲಕ ಭಾರತೀಯ ವ್ಯವಹಾರಗಳ ಬೆಳವಣಿಗೆ ಮತ್ತು ಯಶಸ್ಸಿಗೆ ಒಂದು ಹೊಸ ವೇದಿಕೆಯನ್ನು ಸ್ಥಾಪಿಸಲಾಗುತ್ತದೆ. ಈ ದಿಟ್ಟ ಹೆಜ್ಜೆ ಇಟ್ಟಿರುವ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಉಜ್ವಲ ಭವಿಷ್ಯವನ್ನು ಹೊಂದುವಂತೆ ನಾವು ಆಶಿಸುತ್ತೇವೆ'' ಎಂದರು.

ಫ್ಲಿಪ್ ಕಾರ್ಟ್ ಹೋಲ್ ಸೇಲ್ ತನ್ನ ಕಾರ್ಯಾಚರಣೆಯನ್ನು 2020 ರ ಆಗಸ್ಟ್ ನಲ್ಲಿ ಆರಂಭಿಸಲಿದೆ. ಆರಂಭಿಕ ಹಂತದಲ್ಲಿ ಪೈಲಟ್ ಸೇವೆಗಳು ದಿನಸಿ ಮತ್ತು ಫ್ಯಾಶನ್ ಗೆ ಸೀಮಿತವಾಗಿರುತ್ತವೆ. ಈ ಸೇವೆಯ ಮುಖ್ಯಸ್ಥರಾಗಿ ಫ್ಲಿಪ್ ಕಾರ್ಟ್ ನ ಹಿರಿಯ ಅಧಿಕಾರಿಯಾಗಿರುವ ಆದರ್ಶ ಮೆನನ್ ಸೇವೆ ಸಲ್ಲಿಸಲಿದ್ದಾರೆ. ಸುಲಲಿತವಾಗಿ ವ್ಯವಹಾರಗಳು ನಡೆಯಲು ಅನುಕೂಲವಾಗುವಂತೆ ಸಮೀರ್ ಅಗರ್ವಾಲ್ ಅವರು ವಾಲ್ ಮಾರ್ಟ್ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಮುಂದುವರಿಯಲಿದ್ದಾರೆ. ಮುಂದಿನ ದಿನಗಳಲ್ಲಿ ವಾಲ್ ಮಾರ್ಟ್ ನಲ್ಲಿ ಮತ್ತೊಂದು ಹುದ್ದೆಯನ್ನು ವಹಿಸಿಕೊಳ್ಳುವವರೆಗೆ ಅವರು ಈ ಹುದ್ದೆಯಲ್ಲಿ ಮುಂದುವರಿಯುತ್ತಾರೆ.

ಫ್ಲಿಪ್ ಕಾರ್ಟ್ ಹೋಲ್ ಸೇಲ್ ನ ಹಿರಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಆದರ್ಶ ಮೆನನ್ ಅವರು ಮಾತನಾಡಿ, ``ಕಳೆದ ಹಲವು ವರ್ಷಗಳಿಂದ ವಾಲ್ ಮಾರ್ಟ್ ಇಂಡಿಯಾ ಮತ್ತು ಫ್ಲಿಪ್ ಕಾರ್ಟ್ ಗ್ರೂಪ್ ದೇಶದ ಕಿರಾಣಗಳು ಮತ್ತು ಎಂಎಸ್ಎಂಇಗಳ ಬಲವರ್ಧನೆಗೆ ಕೆಲಸ ಮಾಡುತ್ತಿದ್ದವು. ಇದೀಗ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಈ ಸೇವೆಯನ್ನು ಮತ್ತಷ್ಟು ಶಕ್ತಿಶಾಲಿಯಾಗಿ ಮುಂದುವರಿಸಲಿದೆ. ತಮ್ಮ ವ್ಯವಹಾರಗಳು ಮತ್ತು ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಸಾವಿರಾರು ಕಿರಾಣಗಳು ಫ್ಲಿಪ್ ಕಾರ್ಟ್ ನೊಂದಿಗೆ ಪಾಲುದಾರಿಕೆಯನ್ನು ಹೊಂದಿವೆ. ಈ ಕಿರಾಣಗಳು ಮತ್ತು ಎಂಎಸ್ಎಂಇಗಳ ಮತ್ತಷ್ಟು ಬೆಳವಣಿಗೆಗೆ ಮತ್ತು ಅವರ ಜೀವನ ಮಟ್ಟ ಸಮೃದ್ಧಿ ಹೊಂದಲು ಅವಕಾಶಗಳನ್ನು ನೀಡುವ ಫ್ಲಿಪ್ ಕಾರ್ಟ್ ಹೋಲ್ ಸೇಲ್ ಉಪಕ್ರಮದ ಭಾಗವಾಗುತ್ತಿರುವುದಕ್ಕೆ ನನಗೆ ಸಂತಸವೆನಿಸುತ್ತಿದೆ. ಫ್ಲಿಪ್ ಕಾರ್ಟ್ ಮತ್ತು ವಾಲ್ ಮಾರ್ಟ್ ಎರಡೂ ಸೇರಿ ಕಿರಾಣಗಳು ಮತ್ತು ಎಂಎಸ್ಎಂಇಗಳಿಗೆ ಹೋಲ್ ಸೇಲ್ ಅನುಭವದ ಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಆದ್ಯತೆ ನೀಡಲಿವೆ" ಎಂದು ತಿಳಿಸಿದರು.

ವಾಲ್ ಮಾರ್ಟ್ ಇಂಡಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮೀರ್ ಅಗರ್ವಾಲ್ ಅವರು ಮಾತನಾಡಿ, ``ಭಾರತದ ಆರ್ಥಿಕತೆಯ ಬೆಳವಣಿಗೆಯಲ್ಲಿ ಕಿರಾಣಗಳು ಮತ್ತು ಎಂಎಸ್ಎಂಇಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ಈ ಉಪಕ್ರಮವು ಪರಿಗಣಿಸುತ್ತದೆ. ಈ ನಿಟ್ಟಿನಲ್ಲಿ ವಾಲ್ ಮಾರ್ಟ್ ಮತ್ತು ಫ್ಲಿಪ್ ಕಾರ್ಟ್ ಹೋಲ್ ಸೇಲ್ ಎರಡೂ ಸೇರಿ ದೇಶದ ಕಿರಾಣಗಳಿಗೆ ಸೇವೆ ಸಲ್ಲಿಸುತ್ತಿರುವ 12 ವರ್ಷಗಳ ವರ್ಷಗಳ ಪರಂಪರೆಯನ್ನು ನಿರ್ಮಾಣ ಮಾಡುವ ಅವಕಾಶವನ್ನು ಪಡೆದುಕೊಳ್ಳಲಿವೆ" ಎಂದು ತಿಳಿಸಿದರು.

ವಾಲ್ ಮಾರ್ಟ್ ಇಂಡಿಯಾದ ಬ್ಯುಸಿನೆಸ್ ಅನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಅದರ ಉದ್ಯೋಗಿಗಳು ಫ್ಲಿಪ್ ಕಾರ್ಟ್ ಅನ್ನು ಸೇರ್ಪಡೆಗೊಳ್ಳಲಿದ್ದಾರೆ. ಕೇಂದ್ರ ಕಚೇರಿಯ ತಂಡಗಳನ್ನು

ಮುಂದಿನ ವರ್ಷ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ. ಬೆಸ್ಟ್ ಪ್ರೈಸ್ ಬ್ರ್ಯಾಂಡ್ ತನ್ನ 28 ಸ್ಟೋರ್ ಗಳು ಮತ್ತು ಇ-ಕಾಮರ್ಸ್ ಕಾರ್ಯಾಚರಣೆ ಮೂಲಕ ಒಮ್ನಿ ಚಾನೆಲ್ ನೆಟ್ ವರ್ಕ್ ನಲ್ಲಿ ತನ್ನ 1.5 ದಶಲಕ್ಷಕ್ಕೂ ಅಧಿಕ ಸದಸ್ಯರಿಗೆ ಸೇವೆಯನ್ನು ಮುಂದುವರಿಸಲಿದೆ.

**About Walmart,Inc. in India**

For over a decade, Walmart, Inc. has maintained a commitment to benefit people and businesses across India. It enables a mix of shopping experiences and helps local sellers and suppliers, including kiranas, MSMEs, farmers, artisans and women-owned businesses, to modernize, prosper and create local jobs. Walmart India Development Center is engaged in cutting-edge engineering and product development to offer customers anywhere, anytime shopping experience. Walmart's Bangalore Global Sourcing hub exports high-quality India-made goods to major markets worldwide. The Walmart India Development Center and Walmart Global Sourcing will continue to operate under their existing structure and remain unchanged by this acquisition. The Flipkart Group operates India's leading e-commerce ecosystem, with Flipkart; fashion site Myntra; Flipkart Wholesale, which now includes the Best Price brand; the PhonePe payments and financial services platform; and the Ekart logistics network.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India's e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs has inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

For more information, please contact media@flipkart.com.

###